ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

NATIONAL HEALTH MISSION
राष्ट्रीय स्वास्थ्य मिशन



# ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನ

## ಹಿಂದುಳಿದ ಸಮುದಾಯಗಳ ಆರೋಗ್ಯವನ್ನು ಖಚಿತಪಡಿಸಿಕೊಳ್ಳಲು ಗ್ರಾಮ ಪಂಚಾಯಿತಿ ನಾಯಕತ್ವವನ್ನು ಬಲಪಡಿಸಲು ಒಂದು ಒಗ್ಗೂಡಿಸುವಿಕೆ ಉಪಕ್ರಮ

USAID
FROM THE AMERICAN PEOPLE

KHPT
engage, innovate, empower

# ಹಿನ್ನೆಲೆ

ಗ್ರಾಮ ಪಂಚಾಯಿತಿಗಳು ಗ್ರಾಮಗಳ ಆಡಳಿತ, ಅಭಿವೃದ್ಧಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಕೇಂದ್ರಗಳಾಗಿವೆ. ವಿಕೇಂದ್ರೀಕೃತ ಸೇವೆಗಳ ಮೂಲಕ ಆರೋಗ್ಯವನ್ನು ವ್ಯವಸ್ಥೆಯನ್ನು ಸುಧಾರಿಸಲು, ಅದರಲ್ಲೂ ಗ್ರಾಮೀಣ ಆರೋಗ್ಯವನ್ನು ಸುಧಾರಿಸಲು, ಗ್ರಾಮೀಣ ಪ್ರದೇಶಗಳ ಸಾರ್ವಜನಿಕ ಆರೋಗ್ಯ ಅಗತ್ಯತೆಗಳನ್ನು ಗುರುತಿಸಲು, ಸಾರ್ವಜನಿಕ ಆರೋಗ್ಯ ಸೇವೆಗಳು ಮತ್ತು ಸಾರ್ವಜನಿಕ ಸೇವೆಗಳ ಲಭ್ಯತೆಯನ್ನು ಅತ್ಯಂತ ದುರ್ಬಲ ಹಾಗೂ ತಲುಪದ ಜನ ಸಂಖ್ಯೆಗೆ ವಿಸ್ತರಿಸುವ ಅಪಾರ ಸಾಮರ್ಥ್ಯವನ್ನು ಹೊಂದಿವೆ.

ಈ ದೃಷ್ಟಿಯಿಂದ, ಕರ್ನಾಟಕ ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದ ತಕ್ಷಣದ ಸವಾಲನ್ನು ಎದುರಿಸಲು ವಿಶೇಷವಾಗಿ ಗ್ರಾಮ ಪಂಚಾಯಿತಿ ಕೋವಿಡ್ ಕಾರ್ಯಪಡೆಗಳನ್ನು ಸ್ಥಾಪಿಸಿದೆ. ಕ್ಷಯ, ಮಧುಮೇಹ, ಅಧಿಕರಕ್ತದೊತ್ತಡ ಮತ್ತು ಇತರ ಸಾಮಾನ್ಯ ಕಾಯಿಲೆಗಳು ಸೇರಿದಂತೆಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳು ಸೇರಿದಂತೆ ತಾಯಿ ಹಾಗೂ ಮಕ್ಕಳ ಆರೋಗ್ಯ ಸುಧಾರಣೆಗೆ ಗಮನಹರಿಸುವುದು ಈ ಕಾರ್ಯಪಡೆಯ ಆಶಯವಾಗಿತ್ತು. ಗ್ರಾಮ ಪಂಚಾಯಿತಿ ಹಂತದಲ್ಲಿ ವಿವಿಧ ಆರೋಗ್ಯ ಕಾರ್ಯಕ್ರಮಗಳ ಜಾರಿಯಲ್ಲಿ ಸಮುದಾಯ ಮಾಲೀಕತ್ವವನ್ನು ಬಲಗೊಳಿಸುವುದು ಗ್ರಾಮ ಪಂಚಾಯಿತಿ ಕೋವಿಡ್ ಕಾರ್ಯಪಡೆಯ ದೃಷ್ಟಿಯಾಗಿದೆ. ಇದು ರಾಷ್ಟ್ರೀಯ ಆರೋಗ್ಯ ಮಿಷನ್ (NHM) ಅಡಿಯಲ್ಲಿ ಜಾರಿಯಾಗುತ್ತಿರುವ ಆದ್ಯತೆಯ ಕಾರ್ಯಕ್ರಮವಾದ 'ಆಯುಷ್ಮಾನ್ ಭಾರತ್' ದಲ್ಲಿ, ಸಮಾನ, ಕೈಗೆಟುಕುವ ಮತ್ತು ಗುಣಮಟ್ಟದ ಆರೋಗ್ಯದ ಸೇವೆಗಳನ್ನು ಜನರ ಅಗತ್ಯತೆಗಳಿಗೆ ಅನುಗುಣವಾಗಿ ಜವಾಬ್ದಾರಿಯುತವಾಗಿ ತಲುಪಿಸುವ ಉದ್ದೇಶವನ್ನು ಹೊಂದಿದೆ.

## ಗ್ರಾಮ ಪಂಚಾಯಿತಿಗಳು: ಒಗ್ಗೂಡಿಸುವಿಕೆ ಮತ್ತು ವಿಕೇಂದ್ರೀಕರಣಕ್ಕಾಗಿ ಪ್ರಧಾನ ವೇದಿಕೆ

**ಗ್ರಾಮ ಪಂಚಾಯತಿ ಪಾರದರ್ಶಕತೆಯನ್ನು ಉತ್ತೇಜಿಸುತ್ತದೆ:** ಎಲ್ಲಾ ಕಾರ್ಯಕ್ರಮಗಳು ಮತ್ತು ಅವುಗಳ ಆಡಳಿತಾತ್ಮಕ ವಿವರಗಳ ಮಾಹಿತಿಯನ್ನು ಸಮುದಾಯವು ಗ್ರಾಮ ಪಂಚಾಯತಿಯಿಂದ ಸುಲಭವಾಗಿ ಪಡೆಯಬಹುದು.

**ಜನರ ಭಾಗವಹಿಸುವಿಕೆಯನ್ನು ಖಚಿತಪಡಿಸುತ್ತದೆ:** ಗ್ರಾಮೀಣ ಸಮುದಾಯದ ಎಲ್ಲ ವರ್ಗಗಳನ್ನು ಪ್ರತಿನಿಧಿಸುತ್ತದೆ. ಇದರಿಂದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನರು ಗರಿಷ್ಠ ಪ್ರಮಾಣದಲ್ಲಿ, ನೇರವಾಗಿ ಭಾಗವಹಿಸುವಿಕೆಯನ್ನು ಸುಗಮಗೊಳಿಸಬಹುದು.

**ಸಹಭಾಗಿತ್ವಕ್ಕೆ ಪೂರಕ ಉತ್ತೇಜನ ನೀಡುತ್ತದೆ:** ಸಮುದಾಯಕ್ಕೆ ಹತ್ತಿರವಾಗಿರುವುದರಿಂದ ಸ್ಥಳೀಯ ವಾಸ್ತವತೆಗಳನ್ನು, ಸ್ಥಳೀಯ ಸನ್ನಿವೇಶಗಳನ್ನು, ಲಭ್ಯವಿರುವ ಸಂಪನ್ಮೂಲಗಳನ್ನು ಮತ್ತು ಆರೋಗ್ಯ ವ್ಯವಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ಹಾಗೂ ಜನರ ಸವಾಲುಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

**ಸ್ವಾಯತ್ತ ಸಂಸ್ಥೆಯಾಗಿರುತ್ತದೆ:** ಗ್ರಾಮ ಪಂಚಾಯತಿಗಳು ಸ್ಥಳೀಯ ಮಟ್ಟದಲ್ಲಿ ಕ್ರಿಯಾತ್ಮಕವಾಗಿ, ಹಣಕಾಸಿನ ವಿಚಾರವಾಗಿ ಮತ್ತು ಆಡಳಿತಾತ್ಮಕವಾಗಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು. ಇದರಿಂದ ಆರೋಗ್ಯ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ಪೂರ್ವಭಾವಿಯಾಗಿ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬಹುದು.

**ಏಕರೂಪತೆಯನ್ನು ಹೆಚ್ಚಿಸುತ್ತದೆ:** ಗ್ರಾಮ ಪಂಚಾಯತಿಗಳು ಏಕರೂಪದ ಮಾನದಂಡಗಳನ್ನು ಮತ್ತು ನಿಯಮಗಳನ್ನು ಫಲಾನುಭವಿಗಳ ಆಯ್ಕೆಗೆ ಅಳವಡಿಸಬಹುದು. ಪ್ರಾಯೋಜಕತ್ವವನ್ನು ಲೆಕ್ಕಿಸದೇ ವೈಯಕ್ತಿಕ ಪರಿಗಣನೆಗಿಂತ ಸಮಗ್ರ ದೃಷ್ಟಿಕೋನವನ್ನು ಖಚಿತಪಡಿಸಿಕೊಳ್ಳಬಹುದು.

**ಉತ್ತರದಾಯಿತ್ವವನ್ನು ಖಚಿತಪಡಿಸುತ್ತದೆ:** ನಿರಂತರ ಸಾಮಾಜಿಕ ಲೆಕ್ಕ ಪರಿಶೋಧನೆಯ ಮೂಲಕ ಚುನಾಯಿತ ಪ್ರತಿನಿಧಿಗಳು ತಕ್ಷಣದ ಅಗತ್ಯದ ಕಡೆ ಗಮನ ನೀಡಲು ಮತ್ತು ಸಕ್ರಿಯ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆ.

**ಚಿತ್ರ 1: ಒಗ್ಗೂಡಿಸುವಿಕೆಗೆ ಗ್ರಾಮ ಪಂಚಾಯತಿ ಏಕೆ ಸೂಕ್ತವಾದ ಆಯ್ಕೆ?**



ಒಗ್ಗೂಡಿಸುವಿಕೆಯ ಕಾರ್ಯನಿರ್ವಹಣೆಯು ಕಾಯ್ದೆ ಬದ್ಧ ವಿವಿಧ ಸಮಿತಿಗಳ, ಸಮುದಾಯ ರಚನೆಗಳ, ಗ್ರಾಮ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಎಲ್ಲ ಇಲಾಖೆಗಳ ಕಾರ್ಯಕರ್ತರ ನಡುವಿನ ಸಮನ್ವಯತೆಯನ್ನು ಒಳಗೊಂಡಿರುತ್ತದೆ. ಗ್ರಾಮ ಪಂಚಾಯಿತಿಯು ಆಡಳಿತವನ್ನು ಕಾರ್ಯಗತಗೊಳಿಸುವ ಪ್ರಧಾನ ವೇದಿಕೆಯಾಗಿದೆ. ಏಕೆಂದರೆ ಕಾರ್ಯನಿರ್ವಹಣೆಯಲ್ಲಿ ಗ್ರಾಮ ಪಂಚಾಯಿತಿಯು ರಾಜ್ಯದ ವಿವಿಧ ಇಲಾಖೆಗಳ ವ್ಯಾಖ್ಯಾನಗಳು ಮತ್ತು ಆದ್ಯತೆಗಳಿಗೆ ಸೀಮಿತವಾಗಿಲ್ಲ. ಆದರೆ ಗ್ರಾಮ ಪಂಚಾಯಿತಿ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡುವ ಸಮುದಾಯಗಳ ಏಕೈಕ ಪ್ರತಿನಿಧಿಯಾಗಿದೆ. ಗ್ರಾಮಸಭೆ, ಗ್ರಾಮ ಆರೋಗ್ಯ ನೈರ್ಮಲ್ಯ ಮತ್ತು ಪೌಷ್ಟಿಕಾಂಶ ಸಮಿತಿ (VHSNC), ಆರೋಗ್ಯ ಕಾರ್ಯಕರ್ತರಾದ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಮತ್ತು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಯಂತಹ ವಿವಿಧ ಇಲಾಖೆಗಳನ್ನು ಪ್ರತಿನಿಧಿಸುವವರು– ಗ್ರಾಮ ಮಟ್ಟದಲ್ಲಿ ಒಗ್ಗೂಡಿಸುವಿಕೆಯ ಉಪಕ್ರಮವನ್ನು ಕೈಗೊಳ್ಳಲು ಇರುವ ಮಹತ್ವದ ವೇದಿಕೆಯಾಗಿದೆ. ಇವರೆಲ್ಲ ತಮ್ಮ ಕಾರ್ಯನಿರ್ವಹಣೆಗೆ ಅನುಗುಣವಾಗಿ ಪ್ರಗತಿ, ಆರೋಗ್ಯ ಮತ್ತು ಅಭಿವೃದ್ಧಿ ಸೇವೆಗಳನ್ನು ವಿನಿಮಯ ಮಾಡಿಕೊಳ್ಳುವುದು, ಹಳ್ಳಿಯಲ್ಲಿನ ಒಟ್ಟಾರೆ ಸ್ಥಿತಿಗತಿಗಳನ್ನು ಸುಧಾರಿಸಲು ಜನರಿಂದ ಪ್ರತಿಕ್ರಿಯೆ ಪಡೆಯುವುದು, ಮಕ್ಕಳ ಮದುವೆ ಮತ್ತು ಮಾನಸಿಕ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸುವುದು ಆಗುತ್ತಿದೆ. ಜನಪ್ರತಿನಿಧಿಗಳ ನಾಯಕತ್ವದಡಿಯಲ್ಲಿ ನಡೆಯುವ ಗ್ರಾಮ ಸಭೆಗಳಲ್ಲಿ ಜನರ ಕಷ್ಟ ಸುಖಗಳನ್ನು ಆಲಿಸುವುದು, ಪರಿಹಾರಗಳನ್ನು ಸೂಚಿಸುವುದು, ಆರೋಗ್ಯ ಕಾರ್ಯಕರ್ತರ ಕಾರ್ಯನಿರ್ವಹಣೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವುದು, ವಾರ್ಷಿಕ ಆರೋಗ್ಯ ಯೋಜನೆ ಕುರಿತು ಚರ್ಚೆ, ಕಟ್ಟುಪಾಡುಗಳಿಲ್ಲದ ಅನುದಾನ ಬಳಕೆ ಇತ್ಯಾದಿ ವಿಷಯಗಳ ಚರ್ಚೆ ನಡೆಯುತ್ತದೆ.

## ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನ

ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನವು ಕರ್ನಾಟಕ ಸರ್ಕಾರವು ದೇಶದಲ್ಲೇ ಮೊದಲ ಬಾರಿಗೆ ಪ್ರಾರಂಭಿಸಿದ ಒಗ್ಗೂಡಿಸುವಿಕೆ ಉಪಕ್ರಮವಾಗಿದೆ. ರಾಜ್ಯದ ಗ್ರಾಮ ಪಂಚಾಯಿತಿಗಳು ಸಮುದಾಯಗಳು ಮತ್ತು ಆರೋಗ್ಯ ಸೌಲಭ್ಯಗಳ ನಡುವಿನ ಹೊಸ ಭರವಸೆಯಾಗಿದೆ. KHPT, ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳೊಂದಿಗೆ ಆಗಸ್ಟ್ 2021 ರಿಂದ ಕಾರ್ಯನಿರ್ವಹಿಸುತ್ತಿದೆ. ಹಿಂದುಳಿದ ಸಮುದಾಯಗಳ ಸಾರ್ವಜನಿಕ ಆರೋಗ್ಯ ಸಮಸ್ಯೆಗಳನ್ನು ನಿವಾರಿಸಲು ಗ್ರಾಮ ಪಂಚಾಯಿತಿಗಳನ್ನು ಹೆಚ್ಚು ಕ್ರಿಯಾಶೀಲಗೊಳಿಸುವ ಮೂಲಕ ಬೆಂಬಲ ನೀಡುತ್ತಿದೆ. ಯುನೈಟೆಡ್ ಸ್ಟೇಟ್ಸ್ಏಜೆನ್ಸಿ ಫಾರ್ ಇಂಟರ್ನ್ಯಾಷನಲ್ ಡೆವಲಪ್ಮೆಂಟ್ (USAID) ಸಹಾಯದೊಡನೆ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮದಲ್ಲಿ ಆರಂಭಿಕವಾಗಿ 14 ಜಿಲ್ಲೆಗಳಲ್ಲಿ ಕ್ಷಯರೋಗ ಮತ್ತು ಸಾಂಕ್ರಾಮಿಕವಲ್ಲದ ರೋಗಗಳ (NCDs) ಹೊರೆಯನ್ನು ಕಡಿಮೆ ಮಾಡುವ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ದೂರದಲ್ಲಿರುವ ಸಮುದಾಯಗಳಲ್ಲಿ ಲಸಿಕೆ ಹಾಕುವ ಪ್ರಮಾಣವು ಹೆಚ್ಚಿಸುವುದು, **ಸಹಿತಾ ಸಹಾಯವಾಣಿ** ಮೂಲಕ ಆರೋಗ್ಯ ಸೇವೆಯ ಆಪ್ತ ಸಮಾಲೋಚನೆ ಮತ್ತು ಬಾಲ್ಯವಿವಾಹಗಳ ಸಂಭವವನ್ನು ತಡೆಗಟ್ಟುವ ಪ್ರಯತ್ನ ಆಗುತ್ತಿದೆ.

ಈ ಹಿನ್ನೆಲೆಯಲ್ಲಿ ಕ್ಷಯರೋಗ ಮತ್ತು ಸಾಂಕ್ರಾಮಿಕವಲ್ಲದ ರೋಗಗಳ ತಪಾಸಣೆ ಮತ್ತು ಪರೀಕ್ಷೆಯ ಪ್ರಮಾಣವನ್ನು ಹೆಚ್ಚಿಸಲು, ಜೊತೆಗೆ ಲಸಿಕೆ ತೆಗೆದುಕೊಳ್ಳುವುದನ್ನು ಅನುಷ್ಠಾನ ಜಿಲ್ಲೆಗಳಲ್ಲಿ ವೃದ್ಧಿಸಲು ಕರ್ನಾಟಕ ಸರ್ಕಾರವು ತನ್ನ ವಾರ್ಷಿಕ ಬಜೆಟ್‌ನಲ್ಲಿ ರಾಜ್ಯದ ಎಲ್ಲಾ 31 ಜಿಲ್ಲೆಗಳಿಗೆ ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನ (GPAAA) ವನ್ನು ವಿಸ್ತರಿಸಲು ಅವಕಾಶವನ್ನು ಮಾಡಿದೆ. ಕೆಹೆಚ್‌ಪಿಟಿಯು ಈ ಕಾರ್ಯಕ್ರಮವನ್ನು ರಾಜ್ಯಕ್ಕೆ ವಿಸ್ತರಿಸಲು ಬೇಕಾದ ತಾಂತ್ರಿಕ ನೆರವನ್ನು ಒದಗಿಸುವ ಕಾರ್ಯವನ್ನು ಮುಂದುವರಿಸುತ್ತದೆ.

**ಉದ್ದೇಶ**


ಗ್ರಾಮೀಣ ಕರ್ನಾಟಕದ ಪ್ರತಿ ಬಡಕುಟುಂಬದ ಮನೆ ಬಾಗಿಲಿಗೆ ಸೇವೆಗಳನ್ನು ಪಂಚಾಯಿತಿ ಕಾರ್ಯಕರ್ತರು ಅಂದರೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹೊಸದಾಗಿ ಸ್ಥಾಪಿಸಲಾದ ಗ್ರಾಮ ಪಂಚಾಯಿತಿ ಕಾರ್ಯಪಡೆಯ ಸದಸ್ಯರು, ಆರೋಗ್ಯ ಮತ್ತು ಯೋಗಕ್ಷೇಮ ಕೇಂದ್ರಗಳು (HWC), ಆಶಾ, ಮಿಡ್ಲ್ ಲೆವೆಲ್ ಹೆಲ್ತ್ ಪ್ರಾಕ್ಟಿಶ್ನರ್ (MLHP), ಎಎನ್‌ಎಂ ಮೂಲಕ ಕೊಂಡೊಯ್ಯುವುದು ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನ (GPAAA)ದ ಆಶಯವಾಗಿದೆ.

## ವ್ಯಾಪ್ತಿ

ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನವನ್ನು ಸೆಪ್ಟೆಂಬರ್ **2021** ರಿಂದ **14** ಜಿಲ್ಲೆಗಳ **2816** ಗ್ರಾಮ ಪಂಚಾಯಿತಿಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಇದು ಸುಮಾರು **20** ದಶಲಕ್ಷ ಗ್ರಾಮೀಣ ಜನಸಂಖ್ಯೆಯನ್ನು ಒಳಗೊಂಡಿದೆ. ಈ ಕಾರ್ಯಕ್ರಮವು ಗ್ರಾಮ ಪಂಚಾಯಿತಿಗಳಲ್ಲಿ ಆರೋಗ್ಯವನ್ನು ಪುನರುಜ್ಜೀವನಗೊಳಿಸುವಲ್ಲಿ ಯಶಸ್ವಿಯಾಗಿದೆ ಮತ್ತು ತಳ ಮಟ್ಟದಲ್ಲಿ ಒಗ್ಗೂಡಿಸುವಿಕೆಯನ್ನು ಪ್ರಾತ್ಯಕ್ಷಿಕರಣಗೊಳಿಸಿದೆ.

ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನದ ಯಶಸ್ಸಿನ ಪರಿಣಾಮದ ಆಧಾರದ ಮೇಲೆ, ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಸೆಪ್ಟೆಂಬರ್ **2022** ರಿಂದ **31** ಜಿಲ್ಲೆಗಳ ಎಲ್ಲ **5957** ಗ್ರಾಮ ಪಂಚಾಯಿತಿ ಇದ್ನು ವಿಸ್ತರಿಸಿದೆ. ಕರ್ನಾಟಕದ ಸುಮಾರು **37** ದಶಲಕ್ಷ ಜನಸಂಖ್ಯೆಯನ್ನು ತಲುಪುವ ಕಾರ್ಯಕ್ರಮ ಇದಾಗಿದೆ.

**ಪ್ರಾಯೋಗಿಕ ಹಂತ: ಕರ್ನಾಟಕದ 14 ಜಿಲ್ಲೆಗಳ 2816 ಗ್ರಾಮ ಪಂಚಾಯಿತಿಗಳು**





**ವಿಸ್ತರಣೆ ಹಂತ: ಕರ್ನಾಟಕದ 31 ಜಿಲ್ಲೆಗಳ 5957 ಗ್ರಾಮ ಪಂಚಾಯಿತಿಗಳು**




## ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನದ ಮೂಲಕ ಒಗ್ಗೂಡಿಸುವಿಕೆಯನ್ನು ಉತ್ತೇಜಿಸುವುದು

ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನವು ಗ್ರಾಮ ಪಂಚಾಯಿತಿ ಕಾರ್ಯಪಡೆಯ (GPTF) ಕ್ರಿಯಾಶೀಲ ನಾಯಕತ್ವದ ಮೂಲಕ ಅನುಷ್ಠಾನಗೊಳ್ಳುತ್ತಿದೆ. ನಿರ್ದಿಷ್ಟವಾಗಿ ಉನ್ನತೀಕರಣ, ಅರಿವು ಮೂಡಿಸುವುದು, ಗ್ರಾಮ ಪಂಚಾಯಿತಿ ಮತ್ತು ಗ್ರಾಮ ಮಟ್ಟದಲ್ಲಿ ಕಳಂಕರಹಿತ ವಾತಾವರಣವನ್ನು ಸೃಷ್ಟಿಸುವ ಕಾರ್ಯವನ್ನು ಮಾಡುತ್ತಿದೆ. ಇದು ಗ್ರಾಮ ಮಟ್ಟದವೇದಿಕೆಗಳ ಮೂಲಕ ಅಂದರೆ, ಸಮುದಾಯ ರಚನೆಗಳಾದ ಗ್ರಾಮಸಭೆಗಳು, ಸ್ವ-ಸಹಾಯ ಗುಂಪುಗಳು (SHGs), MNREGA ಗುಂಪುಗಳು, ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿಗಳು (SDMC), ಗ್ರಾಮ ಆರೋಗ್ಯ ನೈರ್ಮಲ್ಯ ಮತ್ತು ಪೌಷ್ಟಿಕಾಂಶ ಸಮಿತಿಗಳು (VHSNC) ಇತ್ಯಾದಿಗಳ ಮೂಲಕ ಜನರನ್ನು ತಲುಪುವ ಗುರಿಯನ್ನು ಹೊಂದಿದೆ. ಗ್ರಾಮ ಮಟ್ಟದ ಆರೋಗ್ಯ ಉಪ ಸಮಿತಿ ಅಂದರೆ, VHSNCಗಳನ್ನು ಬಲಪಡಿಸಲು ಆರೋಗ್ಯ ಕಾರ್ಯಕರ್ತರು ಮತ್ತು ಸಮುದಾಯ ರಚನೆಗಳ ನಡುವಿನ ಸಂಬಂಧಗಳನ್ನು ಬಲಪಡಿಸುವುದು. ಸಮುದಾಯದ ರಚನೆಗಳು ನಿಯಮಿತ ಸಂವಾದಗಳ ಮೂಲಕ ಸಮುದಾಯದ ಅಗತ್ಯಗಳನ್ನು ಗುರುತಿಸುವ ಮತ್ತು ಉಲ್ಲೇಖಿತ ಸೇವೆಗಳ ಮೂಲಕ ಅಗತ್ಯತೆಗಳಿಗೆ ಪ್ರತಿಕ್ರಿಯಿಸುತ್ತವೆ. ಜೊತೆಗೆ ಜಾಗೃತಿ ಮೂಡಿಸುತ್ತವೆ. ಆರೋಗ್ಯ ಉತ್ತೇಜನ ಪ್ರಯತ್ನಗಳಲ್ಲಿ ತೊಡಗಿಸಿಕೊಂಡಿವೆ.





**ಚಿತ್ರ 2: ಒಗ್ಗೂಡಿಸುವಿಕೆಯನ್ನು ಕಾರ್ಯಗತಗೊಳಿಸುವುದು**

ಒಗ್ಗೂಡಿಸುವಿಕೆಯನ್ನು ಉತ್ತೇಜಿಸಲು ಗ್ರಾಮ ಸಭೆಯು ಗ್ರಾಮ ಮಟ್ಟದ ಪ್ರಮುಖ ವೇದಿಕೆಯಾಗಿದೆ. ವಿಎಚ್‌ಎಸ್‌ಎನ್‌ಸಿ, ಆರೋಗ್ಯ ಕಾರ್ಯಕರ್ತರಾದ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರೊಂದಿಗೆ, ತಾಯಿ ಮತ್ತು ಮಕ್ಕಳ ಆರೋಗ್ಯ ವಿಷಯದಲ್ಲಿ ವಿವಿಧ ಇಲಾಖೆಗಳನ್ನು ಪ್ರತಿನಿಧಿಸುವಲ್ಲಿ ವಿಶೇಷ ಪರಿಣತಿಯನ್ನು ಹೊಂದಿದೆ. ಆರೋಗ್ಯ ಮತ್ತು ಅಭಿವೃದ್ಧಿ ಸೇವೆಗಳ ಪ್ರಗತಿಯನ್ನು ಹಂಚಿಕೊಳ್ಳುವುದರ ಜೊತೆಗೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರತಿನಿಧಿಗಳು ಬಾಲ್ಯವಿವಾಹ, ಮಾನಸಿಕ ಆರೋಗ್ಯ, ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ಕಾಯಿಲೆಗಳಂತಹ ಗಂಭೀರ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಬಹುದು. ಗ್ರಾಮ ಪಂಚಾಯಿತಿಗಳು ಪಂಚಾಯಿತಿ ಮತ್ತು ಅದರ ಅಧಿಕಾರಿಗಳಿಗೆ ಸಮುದಾಯದ ಅಗತ್ಯತೆಗಳು, ಆದ್ಯತೆಗಳು ಮತ್ತು ಚಟುವಟಿಕೆಗಳನ್ನು ಯೋಜಿಸಲು ಸಮುದಾಯ ಗುಂಪುಗಳಾದ ಸ್ವಸಹಾಯ ಗುಂಪುಗಳ ಒಕ್ಕೂಟ, ಗ್ರಾಮ ಪಂಚಾಯಿತಿ ಕಾರ್ಯಪಡೆಗಳು ಮತ್ತು MNREGA ಗುಂಪುಗಳು ಮತ್ತು ಅವರ ಪ್ರತಿನಿಧಿಗಳೊಂದಿಗೆ ಚರ್ಚಿಸಲು ಅವಕಾಶ ಮಾಡಿಕೊಡುತ್ತವೆ. ಈ ಗುಂಪುಗಳಲ್ಲಿ ಗ್ರಂಥಪಾಲಕರು, ANMಗಳು, ಸಮುದಾಯ ಆರೋಗ್ಯಾಧಿಕಾರಿಗಳು, ಮತ್ತು ಶಿಕ್ಷಕರು ಸೇರಿರುತ್ತಾರೆ.

ಗ್ರಾಮ ಪಂಚಾಯಿತಿಯು, HWC ಸಿಬ್ಬಂದಿ ಬೆಂಬಲದೊಂದಿಗೆ, ಆರೋಗ್ಯ ಸೇವೆಗಳ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಬಹುದು. ಗ್ರಾಮ ಪಂಚಾಯಿತಿ ಸಿಬ್ಬಂದಿ ತಮ್ಮ ನಾಯಕತ್ವದೊಂದಿಗೆ ಸಂಘಟನಾತ್ಮಕ ಉಪಕ್ರಮಗಳು ಕೈಗೊಳ್ಳಬಹುದು. ಕುಟುಂಬ ವೈದ್ಯರುಗಳು, ಸಮುದಾಯಗಳ ರಚನೆಗಳು ದುರ್ಬಲ ವರ್ಗದವರಲ್ಲಿ ಅರಿವು ಮೂಡಿಸಬಹುದು. ಎಚ್‌ಡಬ್ಲ್ಯುಸಿ ಸಿಬ್ಬಂದಿ (HFW ಇಲಾಖೆಯಿಂದ) ಅಗತ್ಯ ಜನ ಸಂಖ್ಯೆಗೆ ಆರೋಗ್ಯ ಸೇವೆಗಳ ಸೂಕ್ತ ವಿತರಣೆಗೆ ತಮ್ಮ ತಾಂತ್ರಿಕ ಕೌಶಲ್ಯಗಳನ್ನು ಬಳಸಲು ಸಹಾಯ ಮಾಡಬಹುದು.

ಗ್ರಾಮ ಪಂಚಾಯಿತಿ ಸಿಬ್ಬಂದಿ ಜನ ಆರೋಗ್ಯ ಸಮಿತಿಗೆ (ಗ್ರಾಮ ಪಂಚಾಯಿತಿ ಸದಸ್ಯರು) ನೆರವು ನೀಡಬಹುದು. ಗ್ರಾಮ ಮಟ್ಟದಲ್ಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಅಂಗನವಾಡಿ ಮೇಲ್ವಿಚಾರಕರು ಮತ್ತು ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಸೇರಿದಂತೆ ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ (ಐಸಿಡಿಎಸ್) ಯನ್ನು ಅನುಷ್ಠಾನಗೊಳಿಸಬಹುದು. ಜೊತೆಗೆ, ಗ್ರಾಮ ಪಂಚಾಯಿತಿಗಳು ಬಾಲ್ಯ ವಿವಾಹ, ಪೋಷಣೆ, ಲಿಂಗ ಸಮಾನತೆ, ಹಿಂಸಾಚಾರ, ಇತ್ಯಾದಿ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಬಹುದು.



# ವಿನೂತನ ವಿಧಾನಗಳು




## ಪಂಚಾಯಿತಿಗಳಿಗೆ ಆರೋಗ್ಯ ನಿರ್ವಹಣಾ ಕಿಟ್‌ಗಳ ವಿತರಣೆ

ಇದು ಈ ಯೋಜನೆಯ ಪ್ರಮುಖ ಆಧಾರ ಸ್ತಂಭಗಳಲ್ಲಿ ಒಂದು. ತಪಾಸಣೆ ಮತ್ತು ಪರೀಕ್ಷೆ ಕಿಟ್‌ಗಳು ಸೇರಿದಂತೆ ತಾಂತ್ರಿಕ ಸಲಕರಣೆಗಳನ್ನು ನೀಡುವುದರ ಮೂಲಕ ಆರೋಗ್ಯ ಸೇವೆಗಳು ಮತ್ತು ಗ್ರಾಮ ಪಂಚಾಯಿತಿಗಳು ಸಾಮರ್ಥ್ಯಗಳನ್ನು ಬಲಪಡಿಸುವುದಾಗಿದೆ. ಒಂಭತ್ತು ರೀತಿಯ ಆರೋಗ್ಯ ಆರೈಕೆ ಸಲಕರಣೆಗಳನ್ನು ಒಳಗೊಂಡ ಆರೋಗ್ಯ ನಿರ್ವಹಣಾ ಕಿಟ್‌ನ್ನು ಸಿದ್ಧಪಡಿಸಲಾಗಿದೆ. ಇದರಲ್ಲಿ ರಕ್ತದ ಒತ್ತಡದ ಮಾನಿಟರ್, ಹಿಮೋಗ್ಲೋಬಿನೋ ಮೀಟರ್, ಗ್ಲುಕೋ ಮೀಟರ್, ತೂಕದ ಯಂತ್ರ ಮತ್ತು BMI ಚಾರ್ಟ್, ಪಲ್ಸ್ ಆಕ್ಸಿಮೀಟರ್, ಇನ್‌ಫ್ರಾರೆಡ್ ಥರ್ಮಾಮೀಟರ್ ಮತ್ತು MUAC ಟೇಪ್ ಸೇರಿದೆ. ಮುಂಚೂಣಿ ಕಾರ್ಯಕರ್ತರು ಮತ್ತು ಆರೋಗ್ಯ ಆರೈಕೆ ಸೌಲಭ್ಯ ನೀಡುವ ಸಿಬ್ಬಂದಿ ನೆರವಿನೊಂದಿಗೆ ಸಮುದಾಯದಲ್ಲಿ ಆರೋಗ್ಯ ಶಿಬಿರಗಳನ್ನು ಏರ್ಪಡಿಸಲು ಈ ಕಿಟ್‌ನ್ನು ಗ್ರಾಮ ಪಂಚಾಯಿತಿಗೆ ಸರಬರಾಜು ಮಾಡಲಾಗಿದೆ. ಈ ಆರೋಗ್ಯ ನಿರ್ವಹಣಾ ಕಿಟ್ ಅತ್ಯಂತ ದೂರದಲ್ಲಿರುವ ಜನಸಂಖ್ಯೆಗೆ ಆರೋಗ್ಯ ರಕ್ಷಣೆ ಅವಕಾಶವನ್ನು ಕಲ್ಪಿಸುತ್ತದೆ ಮತ್ತು ಹೆಚ್ಚಿನ ಆರೈಕೆ ಸೌಲಭ್ಯಗಳಿಗಾಗಿ ಮುಂದಿನ ಹಂತಕ್ಕೆ ಶಿಫಾರಸು ಮಾಡಲು ಅನುಕೂಲವಾಗುತ್ತದೆ.

## ದುರ್ಬಲ ಸಮುದಾಯಗಳಿಗಾಗಿ ಆರೋಗ್ಯ ಶಿಬಿರಗಳ ಆಯೋಜನೆ

ಅತ್ಯಂತ ದುರ್ಬಲ ಸಮುದಾಯಗಳ ಅಗತ್ಯಗಳನ್ನು ಪೂರೈಸಲು ಸಂಬಂಧಿಸಿದ ಭಾಗೀದಾರರ ಭಾಗವಹಿಸುವಿಕೆಯ ಮೂಲಕ ಸೂಕ್ಷ್ಮ ಯೋಜನೆಯನ್ನು ತಯಾರಿಸಿದ ನಂತರ ಗ್ರಾಮ ಪಂಚಾಯಿತಿಗಳು ಆರೋಗ್ಯ ನಿರ್ವಹಣಾ ಕಿಟ್‌ನ್ನು ಬಳಸಿಕೊಂಡು ಆರೋಗ್ಯ ಶಿಬಿರಗಳನ್ನು ಆಯೋಜಿಸುತ್ತಿವೆ. ತಮ್ಮ ಕೆಲಸದ ಸಮಯದಲ್ಲಿ ಆರೋಗ್ಯ ಸೌಲಭ್ಯಗಳಿರುವೆಡೆಗೆ ಭೇಟಿ ಮಾಡಲು ಅವಕಾಶವಾಗದ ಎಂಎನ್‌ಆರ್‌ಇಜಿಎ ಕೆಲಸಗಾರರು ಮತ್ತು ದೈನಂದಿನ ಕೂಲಿಗಾರರಿಗೆ, ಹಾಗೆಯೇ ಆರೋಗ್ಯ ಸೌಲಭ್ಯಗಳನ್ನು ಪಡೆಯಲು ತಮ್ಮ ಮನೆಗಳಿಂದ ಹೊರಬರಲಾಗದ ವೃದ್ಧರು, ಮಹಿಳೆಯರು, ಮಕ್ಕಳು ಮತ್ತು ಅಂಗವಿಕಲರಿಗೆ ಬಿಡಲು ಸಾಧ್ಯವಾಗದವರಿಗೆ ಆರೋಗ್ಯ ಶಿಬಿರಗಳನ್ನು ಆಯೋಜಿಸಲಾಗಿದೆ. ಈ ಸಮುದಾಯದವರಿಗೆ ಕ್ಷಯ, ಮಧುಮೇಹ, ಅಧಿಕ ರಕ್ತದೊತ್ತಡ, ರಕ್ತಹೀನತೆ, ಅಪೌಷ್ಟಿಕತೆ ತಪಾಸಣೆ ಮಾಡಲು ಮತ್ತು ಮುಂದಿನ ಹಂತದ ಆರೋಗ್ಯ ಸೌಲಭ್ಯಗಳ ಆರೈಕೆಗೆ ಶಿಫಾರಸ್ಸು ಮಾಡಲು ಸಹಾಯಕವಾಗಿದೆ.



## ಸಹಿತಾ ಕೇರ್ ಲೈನ್ ಟೆಲಿಕೌನ್ಸೆಲಿಂಗ್ ಸೇವೆಯ ಮೂಲಕ ಮಾನಸಿಕ ಆರೋಗ್ಯ ನೆರವಿನ ಅವಕಾಶ

ಕರ್ನಾಟಕ ಸರ್ಕಾರದ ಬೆಂಬಲದೊಂದಿಗೆ ಆಗಸ್ಟ್ 2021 ರಲ್ಲಿ ಕೋವಿಡ್–19 ಸಾಂಕ್ರಾಮಿಕ ಸಮಯದಲ್ಲಿ ಸಹಿತಾ ಕೇರ್ ಲೈನ್ ಮೂಲಕ ಹೊರಹೋಗುವ ಉಚಿತ ಟೆಲಿಕೌನ್ಸೆಲಿಂಗ್ ಸೇವೆಯನ್ನು ಪ್ರಾರಂಭಿಲಾಯಿತು. ಗ್ರಾಮ ಪಂಚಾಯಿತಿಗಳು ಜನರಿಗೆ ಮಾನಸಿಕ ಆರೋಗ್ಯ ನೆರವು ತಲುಪುವಂತೆ ಮಾಡಲು ಸಮುದಾಯದಲ್ಲಿ ಜಾಗೃತಿ ಚಟುವಟಿಕೆಗಳ ಸಂದರ್ಭದಲ್ಲಿ ಈ ಸಹಿತಾ ಕೇರ್ ಲೈನ್ ಸೇವೆಯನ್ನು ಉತ್ತೇಜಿಸುತ್ತಿವೆ. ಸಹಿತಾ ಕೇರ್ ಲೈನ್ ತರಬೇತಿ ಪಡೆದ ಸಮಾಲೋಚಕರಿಂದ ಸಮಾಲೋಚನಾ ಸೇವೆಗಳನ್ನು ಒದಗಿಸುವುದರ ಜೊತೆಗೆ ಅಗತ್ಯವಿರುವ ವ್ಯಕ್ತಿಗಳಿಗೆ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಲ್ಲಿ ಹೆಚ್ಚಿನ ಸೇವೆ ಪಡೆಯಲು ಅವಕಾಶ ಕಲ್ಪಿಸುತ್ತದೆ.



### ತರಬೇತಿ ಮತ್ತು ಸಾಮರ್ಥ್ಯ ಬಲವರ್ಧನೆ



ಕೆಹೆಚ್‌ಪಿಟಿ ಯು ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನ ಕುರಿತು ರಾಜ್ಯಾದ್ಯಂತ **41,734** ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ವಿವಿಧ ಮಾದರಿಗಳ ಮೂಲಕ ಮತ್ತು ಆರೋಗ್ಯ ನಿರ್ವಹಣಾ ಕಿಟ್ ಬಳಕೆ ಕುರಿತು ತರಬೇತಿಯನ್ನು ಆಯೋಜಿಸಿದೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರು, ಆಶಾ ಕಾರ್ಯಕರ್ತೆಯರು, ANMs ಮತ್ತು JNNURM ಪ್ರತಿನಿಧಿಗಳನ್ನು ಒಳಗೊಂಡಂತೆ ರಾಜ್ಯದಾದ್ಯಂತ ಗ್ರಾಮ ಪಂಚಾಯಿತಿ ಕಾರ್ಯಪಡೆಗಳಿಗೆ (GPTFs) ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ಮೂಲಕ ನೀಡಿದ ಉಪಗ್ರಹ ತರಬೇತಿಯು ಇದರಲ್ಲಿ ಒಳಗೊಂಡಿದೆ. ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಗ್ರಾಮ ಪಂಚಾಯಿತಿ ಕಾರ್ಯಪಡೆಗಳಿಗೆ ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಪರಿಣಿತ ಸಂಪನ್ಮೂಲ ವ್ಯಕ್ತಿಗಳು ಸೇರಿದಂತೆ ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಪರಿಣಿತರ ತಂಡಗಳನ್ನು ರೂಪಿಸಿ ಕ್ಯಾಸ್ಕೇಡ್ ಮಾದರಿಯಲ್ಲಿ ತರಬೇತಿಗಳನ್ನು ನಡೆಸಲಾಗಿದೆ.

## ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನದ ಸುಸ್ಥಿರತೆ

ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನವನ್ನು ಬಲವರ್ಧನೆ ಮಾಡುವ ದೃಷ್ಟಿಯಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ಮುನ್ನಡೆಸಲಾಗಿದೆ. ವಿಕೇಂದ್ರೀಕರಿಸಿದ ಜವಾಬ್ದಾರಿಯಿಂದ ಅದನ್ನು ಸುಸ್ಥಿರ ಕಾರ್ಯಕ್ರಮವಾಗಿ ವಿನ್ಯಾಸಗೊಳಿಸಲಾಗಿದೆ. ಮಾಲೀಕತ್ವ, ಚಾಲನೆ ಮತ್ತು ನೇತೃತ್ವವನ್ನು ಪಂಚಾಯಿತಿ ವಹಿಸಿದೆ. ಔಪಚಾರಿಕ ಮತ್ತು ಅನೌಪಚಾರಿಕ ಗುಂಪುಗಳಂತಹ ಸಮುದಾಯ ರಚನೆಗಳೊಂದಿಗೆ ನಿಕಟವಾಗಿ ಕೆಲಸ ಮಾಡುವ ಅದರ ಮಾರ್ಗೋಪಾಯವು ಸಮುದಾಯದ ಭಾಗವಹಿಸುವಿಕೆ ಮತ್ತು ಸಂಪೂರ್ಣ ಉಪಕ್ರಮದ ಮಾಲೀಕತ್ವವನ್ನು ಉತ್ತೇಜಿಸುತ್ತದೆ. ಮೇಲಾಗಿ, ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನದ ಒಗ್ಗೂಡಿಸುವಿಕೆ ವಿಧಾನವು ಈ ಪ್ರಯತ್ನವನ್ನು ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳು ಮತ್ತು ಆರೋಗ್ಯ ಇಲಾಖೆಯಿಂದ ಬಂದಿರುವ ಅದರ ಸಿಬ್ಬಂದಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯಕ್ರಮಗಳು ಮತ್ತು ಯೋಜನೆಗಳೊಂದಿಗೆ ಸಂಯೋಜಿಸುತ್ತದೆ. ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆ ವಹಿಸುವ ಮತ್ತು ಉತ್ತೇಜಿಸುವುದರ ಸರಿಯಾದ ಪ್ರಾಮುಖ್ಯತೆ ನೀಡುವುದನ್ನು ಖಾತ್ರಿಪಡಿಸುತ್ತದೆ. ಆರೋಗ್ಯದ ಸಾಮಾಜಿಕ ನಿರ್ಧಾರಕಗಳನ್ನು ಗ್ರಾಮ ಪಂಚಾಯಿತಿನಿಂದ ಸಂಯೋಜಿತವಾಗಿರುವ ಎಲ್ಲಾ ವಲಯಗಳಿಂದ ಒಟ್ಟಾಗಿ ತಿಳಿಸಲಾಗುತ್ತದೆ. ಇದು ದೂರದೃಷ್ಟಿಯ ಮತ್ತು ಸುಸ್ಥಿರ ಉಪಕ್ರಮವನ್ನು ಉಂಟು ಮಾಡುತ್ತದೆ. ಅತ್ಯಂತ ತಳಮಟ್ಟದಲ್ಲಿರುವ ಗ್ರಾಮ ಪಂಚಾಯಿತಿನಂತಹ ಜನಪ್ರತಿನಿಧಿ ಸಂಸ್ಥೆಯು ಆಧಾರವಾಗಿರುವ ವಿಕೇಂದ್ರೀಕೃತ ಮತ್ತು ಒಗ್ಗೂಡಿಸುವಿಕೆ ವಿಧಾನವು ಜನರ ಅಗತ್ಯಗಳನ್ನು ಮುಂಚೂಣಿಗೆ ತರಲು ಸಹಾಯ ಮಾಡುತ್ತದೆ, ಅತ್ಯಂತ ಹಿಂದುಳಿದ ಸಮುದಾಯಗಳು ಎದುರಿಸುತ್ತಿರುವ ನೈಜ ಅಡೆತಡೆಗಳು ಮತ್ತು ಸವಾಲುಗಳನ್ನು ಪರಿಹರಿಸುತ್ತದೆ. ಜನರ ಯೋಗಕ್ಷೇಮಕ್ಕೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳನ್ನು ಯಾವುದೇ ವ್ಯತ್ಯಾಸಗಳನ್ನು ಮಾಡದೆ ಇಲಾಖೆಗಳು ಅಥವಾ ವಲಯಗಳ ಆಧಾರದ ಮೇಲೆ ಸಮಗ್ರವಾಗಿ ಪರಿಹರಿಸುತ್ತದೆ. ಭಾರತದ ಎಲ್ಲಾ ರಾಜ್ಯಗಳ ಪಂಚಾಯಿತಿ ಅಥವಾ ಪಂಚಾಯಿತಿಗಳಿಗೆ ಸಮಾನವಾದ ಸಂಸ್ಥೆಗಳಿಗೆ ಈ ಬುನಾದಿ ತತ್ವಗಳ ಮೂಲಕ ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನವು ಒಂದು ಸುಸ್ಥಿರ ಮತ್ತು ಪುನರಾವರ್ತಿಸಬಹುದಾದ ಮಾದರಿಯಾಗಿದೆ.



# ಗ್ರಾಮ ಪಂಚಾಯಿತಿ ಆರೋಗ್ಯ ನಿರ್ವಹಣಾ ಕಿಟ್

ಕಿಟ್‌ನಲ್ಲಿ ಇರಿಸಲಾದ ತಪಾಸಣಾ ಸಾಮಗ್ರಿಗಳು ಮತ್ತು ಅವುಗಳ ವೆಚ್ಚವನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ

| ಉತ್ಪನ್ನ | ಬ್ರಾಂಡ್ | ಪ್ರಮಾಣ | ದರ | ಮೊತ್ತ | ತೆರಿಗೆ ದರ | ತೆರಿಗೆ | ಮೊತ್ತ |
|---|---|---|---|---|---|---|---|
| ಬ್ಯಾಟರಿಗಳೊಂದಿಗೆ ಡಿಜಿಟಲ್‌ತೂಕದ ಅಳತೆ ಮಾಪಕ | ಮಿವಿಡಾ – ಎಫ್‌ಐಆರ್ ಎಫ್9 | 1 | 550.00 | 550.00 | 18% | 99.00 | 649.00 |
| ಬ್ಲಡ್ ಲ್ಯಾನ್ಸೆಟ್‌ರೌಂಡ್– ಪ್ಯಾಕ್‌ಆಫ್ 100 | ಆಮ್ಕೇ | 2 | 45.27 | 90.54 | 12% | 10.86 | 101.40 |
| ಆಲ್ಕೋಹಾಲ್ ಸ್ವಾಬ್ಸ್ – 100 ರ ಪ್ಯಾಕ್ | ಕಂಟ್ರೋಲ್ ಡಿ | 2 | 45.27 | 90.54 | 12% | 10.86 | 101.40 |
| ಬ್ಯಾಟರಿಗಳೊಂದಿಗೆ ಫಿಂಗರ್ ಟಿಪ್ ಪಲ್ಸ್ ಆಕ್ಸಿಮೀಟರ್ | ಮೈಕ್ರೋಟೆಕ್ – ಬ್ಲಾಕ್ | 2 | 535.00 | 1,070.00 | 5% | 53.50 | 1,123.50 |
| ಬ್ಯಾಟರಿಗಳೊಂದಿಗೆ ಡಿಜಿಟಲ್ ಬಿಪಿಎ ಉಪಕರಣ | ಡಾ. ಮೊರೆಪೆನ್ – BP–02 | 1 | 960.00 | 960.00 | 12% | 115.20 | 1,075.20 |
| ಬ್ಯಾಟರಿಗಳೊಂದಿಗೆ ಗ್ಲುಕೋಮೀಟರ್, ಲ್ಯಾನ್ಸೆಟ್ ಯುನಿಟ್ ಮತ್ತು ಸ್ಟ್ಯಾಂಡರ್ಡ್ ಫ್ರೀ ಸ್ಟ್ರಿಪ್ಸ್ | ಡಾ. ಮೊರೆಪೆನ್ – ಗ್ಲುಕೋ ಒನ್ ಬಿಜಿ–03 | 1 | 150.00 | 150.00 | 12% | 18.00 | 168.00 |
| ಗ್ಲುಕೋ ಸ್ಟ್ರಿಪ್ಸ್ | ಡಾ. ಮೊರೆಪೆನ್ – ಗ್ಲುಕೋ ಒನ್ ಬಿಜಿ–03 | 100 | 12.50 | 1,250.00 | 12% | 150.00 | 1,400.00 |
| ಬ್ಯಾಟರಿಗಳೊಂದಿಗೆ ಹಿಮೋಗ್ಲೋಬಿನೋ ಮೀಟರ್, ಲ್ಯಾನ್ಸೆಟ್ ಯುನಿಟ್‌ಗಳು ಮತ್ತು ಗುಣಮಟ್ಟದ ಉಚಿತ ಸ್ಟ್ರಿಪ್ಸ್ | ಅಕಾನ್ – ಮಿಷನ್ | 1 | 2,321.00 | 2,321.00 | 18% | 417.78 | 2,738.78 |
| ಹಿಮೋಗ್ಲೋಬಿನೋ ಸ್ಟ್ರಿಪ್ಸ್ | ಅಕಾನ್ – ಮಿಷನ್ | 50 | 19.00 | 950.00 | 12% | 114.00 | 1,064.00 |
| ಶಾಕಿರ್ಸ್ MUAC ಅಳತೆ ಟೇಪ್–ಅಡಲ್ಟ್ | | 3 | 15.00 | 45.00 | 12% | 5.40 | 50.40 |
| ಇನ್ಫ್ರಾರೆಡ್ ಥರ್ಮಾಮೀಟರ್ | ಗಿಲ್ಮಾ | 2 | 620.00 | 1,240.00 | 5% | 62.00 | 1,302.00 |
| ಹ್ಯಾಂಡ್ ಸ್ಯಾನಿಟೈಜರ್ 5 ಲೀಟರ್ ಕ್ಯಾನ್ (ನಾನ್‌ಜೆಲ್) | ಮೈಕ್ರೋಟೆಕ್ನಿಕ್ | 1 | 330.00 | 330.00 | 5% | 16.50 | 346.50 |
| ಬೇಸಿಕ್ ಮಾಪನ ಟೇಪ್ 16mm X3 ಮೀಟರ್– PVCಬಾಡಿ & ಸ್ಟೀಲ್ ಬ್ಲೇಡ್ | ಫ್ರೀಮನ್ಸ್ | 1 | 41.50 | 41.50 | 18% | 7.47 | 48.97 |
| ಫುಡ್ ಗ್ರೇಡ್ LDPE ಜೀಪ್ ಲಾಕ್ ಪೌಚ್‌ಗಳು 50 ಮೈಕ್ರಾನ್ – ಗಾತ್ರ 5"X7"–225gms (100 ರ ಪ್ಯಾಕ್) | | 1 | 1.50 | 1.50 | 18% | 0.27 | 1.77 |
| ಕೊರುಗೆಟ್ ಬಾಕ್ಸ್–GP | | 1 | 76.00 | 38.00 | 12% | 4.56 | 42.56 |
| ಪಂಚಾಯಿತಿ ಕಿಟ್ ಬ್ಯಾಗ್ | | 1 | 530.00 | 530.00 | 18% | 95.40 | 625.40 |
| ಕೂಲಿ | | 1 | 40 | 40.00 | | - | 40.00 |
| ಸಾರಿಗೆ | | 1 | 165 | 165.00 | | - | 165.00 |
| **ಒಂದು ಕಿಟ್‌ನ ಬೆಲೆ** | | | | | | | **11,043.89** |
| 20% ವೆಚ್ಚ ಹೆಚ್ಚಳ | | | | | | | 2,208.78 |
| | | | | | | | **13,252.67** |

# ಗ್ರಾಮ ಪಂಚಾಯಿತಿ ನೇತೃತ್ವದಲ್ಲಿ ಆರೋಗ್ಯ ಉಪಕ್ರಮಗಳಿಗಾಗಿ ಅಭಿವೃದ್ಧಿಪಡಿಸಲಾಗಿರುವ ಸಂಪನ್ಮೂಲಗಳು

| ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನದ ಉಪಕ್ರಮಗಳ ಉತ್ತಮ ಅಭ್ಯಾಸಗಳು |
| --- |
| ಪಂಚಾಯಿತಿಗಳ ಅಧಿಕಾರ: ಎಂಜಿಎನ್‌ಆರ್‌ಇಜಿಎ ಕೆಲಸಗಾರರಿಗೆ ಆರೋಗ್ಯ ಸೇವೆಗಳನ್ನು ಅವರ ಕೆಲಸದ ಸ್ಥಳಕ್ಕೆ ಒದಗಿಸುವುದು |
| ಪಂಚಾಯಿತಿನ ಅಧಿಕಾರ: ಟಿಬೆಟಿಯನ್ ಸೆಟ್ಲ್‌ಮೆಂಟ್ ಕ್ಯಾಂಪ್‌ಗಳಲ್ಲಿ ಸಾಂಕ್ರಾಮಿಕವಲ್ಲದ ರೋಗಗಳ ತಪಾಸಣೆ |
| ಪಂಚಾಯಿತಿಗಳ ಅಧಿಕಾರ: ಪ್ರತ್ಯೇಕವಾದ ಬುಡಕಟ್ಟು ಜನಸಂಖ್ಯೆ ಆರೋಗ್ಯ ಆರೈಕೆ ಕಲ್ಪಿಸುವುದು. |
| ದುರ್ಬಲರಿಗೆ ಲಸಿಕೆ ಹಾಕುವುದು: ಗ್ರಾಮೀಣ ಕರ್ನಾಟಕದಲ್ಲಿ ಕೋವಿಡ್ ಲಸಿಕೆ ಕುರಿತು ಜಾಗೃತಿ ಮತ್ತು ಉತ್ತೇಜನೆ. |
| ಪಂಚಾಯಿತಿಗಳ ಅಧಿಕಾರ: ಆರೋಗ್ಯ ವ್ಯವಸ್ಥೆಗಳೊಂದಿಗೆ ಕೆಲಸ ಮಾಡುವುದು ಮತ್ತು ದುರ್ಬಲರಿಗೆ ಅದು ತಲುಪಲು ಮುಂಚೂಣಿಯಲ್ಲಿರುವುದು. |
| ಗ್ರಾಮ ಪಂಚಾಯಿತಿ ಆರೋಗ್ಯ ಅಮೃತ ಅಭಿಯಾನ: ಸಾರ್ವಜನಿಕ ಆರೋಗ್ಯ ಸಮಸ್ಯೆಗಳ ನಿವಾರಣೆಗೆ ಪಂಚಾಯಿತಿಗಳನ್ನು ಸಜ್ಜುಗೊಳಿಸುವುದು |
| ಪಂಚಾಯಿತಿಗಳ ಅಧಿಕಾರ: ಎಲ್ಲರಿಗೂ ಆರೋಗ್ಯ ತಲುಪದಿರುವವರಿಗೆ ತಲುಪುವುದನ್ನು ಖಚಿತಪಡಿಸಿಕೊಳ್ಳುವುದು. |
| **ಗ್ರಾಮ ಪಂಚಾಯಿತಿ ಆರೋಗ್ಯ ನಿರ್ವಹಣಾ ಕಿಟ್‌ನಲ್ಲಿನ ಸಾಧನವನ್ನು ಬಳಸಿಕೊಂಡು ಎಸ್.ಒ.ಪಿ. ಮತ್ತು ಮಾರ್ಗದರ್ಶಿ ವಿಡಿಯೋಗಳು** |
| ಅಳತೆ ಟೇಪ್‌ನ್ನು ಬಳಸಿಕೊಂಡು ವ್ಯಕ್ತಿಯೊಬ್ಬರ ಎತ್ತರವನ್ನು ಅಳೆಯುವುದು. |
| ಇನ್ಫ್ರಾರೆಡ್ ಥರ್ಮಾಮೀಟರ್ ಬಳಸಿ ದೇಹದ ಉಷ್ಣತೆಯನ್ನು ಅಳೆಯುವುದು |
| ಹಿಮೋಗ್ಲೋಬಿನೋ ಮೀಟರ್ ಬಳಸಿ ಹೆಮೊಗ್ಲೋಬಿನ್ ಮಟ್ಟವನ್ನು ಅಳೆಯುವುದು |
| ಗ್ಲುಕೋಮೀಟರ್ ಬಳಸಿ ರಕ್ತದ ಗ್ಲೂಕೋಸ್ ಅನ್ನು ಅಳೆಯುವುದು |
| ಡಿಜಿಟಲ್ ಬಿಪಿ ಉಪಕರಣವನ್ನು ಬಳಸಿಕೊಂಡು ರಕ್ತದೊತ್ತಡವನ್ನು ಅಳೆಯುವುದು |
| ಬಿಎಂಐ (BMI) ಚಾರ್ಟ್‌ನಿಂದ ದೇಹ ಕೊಬ್ಬಿನಾಂಶದ ಲೆಕ್ಕಾಚಾರ |
| MUAC ಟೇಪ್ ಬಳಸಿ ಮಗುವಿನ ಅಪೌಷ್ಟಿಕತೆಯನ್ನು ನಿರ್ಧರಿಸುವುದು |
| ಪಂಚಾಯಿತಿಗಳ ಅಧಿಕಾರ: ಎಂಜಿಎನ್‌ಆರ್‌ಇಜಿಎ ಕೆಲಸಗಾರರಿಗೆ ಆರೋಗ್ಯ ಸೇವೆಗಳನ್ನು ಅವರ ಕೆಲಸದ ಸ್ಥಳಕ್ಕೆ ಒದಗಿಸುವುದು |
| ಪಂಚಾಯಿತಿನ ಅಧಿಕಾರ: ಟಿಬೆಟಿಯನ್ ಸೆಟ್ಲ್‌ಮೆಂಟ್ ಕ್ಯಾಂಪ್‌ಗಳಲ್ಲಿ ಸಾಂಕ್ರಾಮಿಕವಲ್ಲದ ರೋಗಗಳ ತಪಾಸಣೆ |
| ಪಂಚಾಯಿತಿಗಳ ಅಧಿಕಾರ: ಪ್ರತ್ಯೇಕವಾದ ಬುಡಕಟ್ಟು ಜನಸಂಖ್ಯೆ ಆರೋಗ್ಯ ಆರೈಕೆ ಕಲ್ಪಿಸುವುದು. |

**ಮೇಲಿನ ಸಂಪನ್ಮೂಲವನ್ನು ಪಡೆಯಲು ಕೆಳಕಂಡ QR ಕೋಡ್ ಸ್ಕ್ಯಾನ್ ಮಾಡಿ**

# ಕಾರ್ಯಕ್ರಮದ ಪರಿಣಾಮ

**31**
ಕರ್ನಾಟಕದ ಜಿಲ್ಲೆಗಳು

**5,957**
ಗ್ರಾಮ ಪಂಚಾಯಿತಿಗಳು

**52,306**
GPTF ಸದಸ್ಯರ ತರಬೇತಿ

**37.7 ದಶಲಕ್ಷ**
ಜನಸಂಖ್ಯೆಯನ್ನು ತಲುಪಿರುವುದು

### ಕೋವಿಡ್–19 ಲಸಿಕೆ

**44,364** ಲಸಿಕಾ ಶಿಬಿರಗಳು

**15,21,584** ಜನರಿಗೆ ಲಸಿಕೆ ಹಾಕಿಸಲಾಗಿದೆ

### ಸಾಂಕ್ರಾಮಿಕವಲ್ಲದ ರೋಗಗಳ ಪರೀಕ್ಷೆ

**28,217** ಎನ್‌ಸಿಡಿ ಶಿಬಿರಗಳ ಆಯೋಜನೆ

**13,74,904** ಜನರಿಗೆ ಎನ್‌ಸಿಡಿ ತಪಾಸಣೆ

**1,34,051** ಜನರಿಗೆ ಮುಂದಿನ ಚಿಕಿತ್ಸೆಗೆ ಶಿಫಾರಸ್ಸು

### ರಕ್ತಹೀನತೆ ತಪಾಸಣೆ

**1,40,243** ಮಹಿಳೆಯರಿಗೆ 15–49 ವರ್ಷಗಳು ರಕ್ತಹೀನತೆ (ಹೆಚ್‌ಬಿ) ತಪಾಸಣೆ

**12,261** ಮಹಿಳೆಯರಿಗೆ 15–49 ವರ್ಷಗಳು ಕಡಿಮೆ ಹೆಚ್‌ಬಿ ಇರುವುದರಿಂದ ಮುಂದಿನ ತಪಾಸಣೆಗೆ ಶಿಫಾರಸ್ಸು (11ಜಿ/ಡಿ.ಎಲ್.)

### ಕ್ಷಯರೋಗ ತಪಾಸಣೆ

**28,73,714** ಜನರಿಗೆ ಕ್ಷಯರೋಗ ತಪಾಸಣೆ

**25,170** ಜನರಿಗೆ ಕ್ಷಯರೋಗ ಪರೀಕ್ಷೆಗೆ ಶಿಫಾರಸ್ಸು

### ಮಾನಸಿಕ ಆರೋಗ್ಯ ಆಪ್ತ ಸಮಾಲೋಚನೆ

**98,191** ಜನರಿಗೆ ಮಾನಸಿಕ ಆರೋಗ್ಯ ಚೆಕ್‌ಲಿಸ್ಟ್ ಜೊತೆ ತಪಾಸಣೆ

**3,596** ಜನರಿಗೆ ಆಪ್ತ ಸಮಾಲೋಚನೆ

**422** ಜನರಿಗೆ ಮುಂದಿನ ಮಾನಸಿಕ ಆರೋಗ್ಯ ನೆರವಿಗೆ ಶಿಫಾರಸ್ಸು

**6,000** ಆರೋಗ್ಯ ನಿರ್ವಹಣಾ ಕಿಟ್‌ಗಳ ವಿತರಣೆ

**145** ಐ.ಇ.ಸಿ. ಸಾಮಗ್ರಿಗಳ ಅಭಿವೃದ್ಧಿ

**ಫೆಬ್ರವರಿ 28, 2023 ರಂತೆ, 31 ಜಿಲ್ಲೆಗಳಿಗೆ ಸಂಖ್ಯೆಗಳು ನಿಖರವಾಗಿವೆ. ಕರ್ನಾಟಕದಲ್ಲಿ GPAAA ಸೆಪ್ಟೆಂಬರ್ 2021 ರಲ್ಲಿ 14 ಜಿಲ್ಲೆಗಳಲ್ಲಿ ಪ್ರಾರಂಭವಾಯಿತು ಮತ್ತು ಸೆಪ್ಟೆಂಬರ್ 2022 ರಲ್ಲಿ ಉಳಿದ 17 ಜಿಲ್ಲೆಗಳಿಗೆ ವಿಸ್ತರಿಸಲಾಯಿತು.*




**KHPT**
IT Park, 5th Floor,
1-4, Rajajinagar Industrial Area,
Behind KSSIDC Admin office, Rajajinagar,
Bengaluru, Karnataka - 560 044

Ph: + 91 40 0200
Fax: + 91 80 4040 0300
Email: khptblr@khpt.org
Website: www.khpt.org